ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಒ.ಎಸ್.ನಂಃ 1/2022**

ಪಿಡಬ್ಲ್ಯುಃ -1

ದಿನಾಂಕಃ 13.02.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ. ಕೆ. ಎಂ. ಕೆ. ವಕೀಲರಿಂದಃ-

36. ಮಡಿಕೇರಿಯಿಂದ ಮಂಗಳೂರು ಕಡೆಗೆ ಹೋಗುವ ರಸ್ತೆಯ ಮಧ್ಯದಲ್ಲಿ ತಾಳತ್ಮನೆ ಜಂಕ್ಷನ್‌ನಿಂದ ಒಂದು ರಸ್ತೆ ಭಾಗಮಂಡಲಕ್ಕೆ ಹೋಗುತ್ತದೆ ಎಂದರೆ ಸರಿ. ತಾಳತ್ಮನೆ ಜಂಕ್ಷನ್ ನಿಂದ ಮುಂದಕ್ಕೆ ಮಂಗಳೂರು ರಸ್ತೆಯಲ್ಲಿ ಹಾದುಹೋದಾಗ ಕಾಟಕೇರಿ ಜಾಗದ ಎಡ ಭಾಗಕ್ಕೆ ಇರುವ ರಸ್ತೆಯಲ್ಲಿ ಹೋದರೂ ಭಾಗಮಂಡಲಕ್ಕೆ ಹೋಗುತ್ತದೆ ಎಂದರೆ ಸರಿ. ತಾಳತ್ಮನೆ ಜಂಕ್ಷನ್ ನಿಂದ ಹೋಗುವ ರಸ್ತೆ ಮತ್ತು ಕಾಟಕೇರಿ ಜಾಗದಿಂದ ಹೋಗುವ ರಸ್ತೆ ಅಪ್ಪಂಗಳ ಎನ್ನುವ ಜಾಗದಲ್ಲಿ ಸಂಧಿಸುತ್ತವೆ. ಅದಾದ ನಂತರ ಎರಡೂ ರಸ್ತೆಗಳು ಒಂದೇ ರಸ್ತೆಯಲ್ಲಿ ಭಾಗಮಂಡಲ ಕಡೆ ಹೋಗುತ್ತದೆ.

37. ನಿಪಿ-2 ನಕಾಶೆ ನೋಡಿದಾಗ ಕಾಟಕೇರಿಯಿಂದ ಹೋಗುವ ರಸ್ತೆಯು ನಿಪಿ-2 ರಲ್ಲಿ ಕಾಣುವ ಜಮೀನಿನ ಉತ್ತರ ದಿಕ್ಕಿಗೆ ಕಾಣುತ್ತದೆ ಎಂದರೆ ಸರಿ. ತಾಳತ್ಮನೆ ಜಂಕ್ಷನ್ ನಿಂದ ಹೋಗುವ ರಸ್ತೆ ನಿಪಿ-2 ನಕಾಶೆಯ ಜಮೀನುಗಳ ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ತಾಳತ್ಮನೆಯಿಂದ ಹೋಗುವ ಉಡೋತ್ಮೊಟ್ಟೆ ಸ್ಥಳದ ಬಲ ಭಾಗಕ್ಕೆ ಒಂದು ಟಾರ್ ರಸ್ತೆ ಇದ್ದು, ಅದು ಕವಲು ರಸ್ತೆಯಾಗಿ ಹೋಗುತ್ತದೆ ಎಂದರೆ ಸರಿ. ಸದರಿ ಕವಲು ಒಡೆದ ಒಂದು ಮಣ್ಣಿನ ರಸ್ತೆ ದಕ್ಷಿಣದಿಂದ ಉತ್ತರಕ್ಕೆ ಹೋಗುವ ಬಂಡಿ ದಾರಿ ಹಾಗೂ ಅದು ನಿಪಿ-2 ನಕಾಶೆಯಲ್ಲಿ ಕಾಣುತ್ತದೆ ಎಂದರೆ ಸರಿ. ಸದರಿ ಬಂಡಿ ರಸ್ತೆಯನ್ನು ನಿಪಿ-2 ರಲ್ಲಿ ನಿಪಿ-2(ಎ) ಎಂದು ಗುರುತಿಸಲಾಯಿತು.

38 ಕಾಟಕೇರಿಯಿಂದ ಅಪ್ಪಂಗಳಕ್ಕೆ ಹೋಗುವ ರಸ್ತೆಯ ಕೂರನ ಬಾಣೆ ಎನ್ನುವ ಪ್ರದೇಶದಲ್ಲಿ ಒಂದು ಕಾಲು ದಾರಿ ಬಂದು ನಿಪಿ-2(ಎ) ಗೆ ಸಂಧಿಸುತ್ತದೆ

ಎಂದರೆ ಸರಿ. ಸದರಿ ಕೂರನ ಬಾಣೆ ಪ್ರದೇಶದಲ್ಲಿರುವ ಕಾಲುದಾರಿಯು 8 ಅಡಿ 3 ಇಂಚು ಅಗಲ ಮತ್ತು ಉದ್ದ ಇದೆ ಎಂದರೆ ಸಾಕ್ಷಿ ಎಷ್ಟು ಅಡಿ ಅಗಲ ಮತ್ತು ಉದ್ದ ಇದೆ ಎಂದು ಗೊತ್ತಿಲ್ಲ ಆದರೆ ಕಾಲುದಾರಿ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಕಾಲುದಾರಿಯಲ್ಲಿ 4 ಚಕ್ರದ ವಾಹನಗಳು ತಿರುಗಾಡುತ್ತವೆ ಎಂದರೆ ಸರಿಯಲ್ಲ. ನಿಪಿ-2 ನಕಾಶೆಯಲ್ಲಿ 5 ಎಂದು ಬರೆದು ವೃತ್ತಕಾರ ಹಾಕಿದ ಜಾಗವು ನನ್ನ ಭಾಗಕ್ಕೆ ಬಂದಿದೆ ಎಂದರೆ ಸರಿ.

39. ನಿಪಿ-2 ನಕಾಶೆಯಲ್ಲಿ 5 ಅಂಕಿಗೆ ವೃತ್ತಾಕಾರವಾಗಿ ತೋರಿಸಿರುವ ಜಾಗ ನನಗೆ ಸೇರಿದ್ದು, ಸದರಿ ಜಾಗಕ್ಕೆ ನಿಪಿ-2(ಎ) ಬಂಡಿ ಜಾಗ ಮತ್ತು ಉಡೋತ್ ಕಡೆಯಿಂದ ಬರುವ ಬಂಡಿ ದಾರಿ ನನ್ನ ಜಾಗದ ಮಧ್ಯದಲ್ಲಿ ಹಾದು ಹೋಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಬಂಡಿ ದಾರಿ ನನ್ನ ಜಾಗದಲ್ಲಿ ಮಾತ್ರ ಹೋಗುವುದಿಲ್ಲ ಅದು ಸರ್ವೆ ನಂಬರ್ 121/2 ರ ಅಂಚಿನಲ್ಲಿ ಹೋಗುತ್ತದೆ ಎಂದು ನುಡಿಯುತ್ತಾರೆ. ಕೂರನಬಾಣೆಯಿಂದ ಬರುವ ಕಾಲು ದಾರಿ ಮತ್ತು ಉಡೋತ್ ನಿಂದ ಬರುವ ಬಂಡಿದಾರಿ ನನ್ನ ಪಾಲಿಗೆ ಬಂದ ಸರ್ವೆ ನಂಬರ್ 118/1 ಮತ್ತು 119 ರ ಮಧ್ಯದಲ್ಲಿ ಹೋಗುತ್ತದೆ ಎಂದರೆ ಸರಿ. ಸದರಿ ಎರಡೂ ರಸ್ತೆಗಳು ನನಗೆ ಬಂದ ಸರ್ವೆನಂಬರ್ 121/1 ರ ಪೂರ್ವದಿಕ್ಕಿಗೆ ಹೋಗುತ್ತದೆ ಎಂದರೆ ಸರಿ.

40. ಸಾಕ್ಷಿಗೆ ಸರ್ವೆ ನಂಬರ್ 121/2 ರ ಪಹಣಿ ಪತ್ರಿಕೆಯನ್ನು ತೋರಿಸಲಾಯಿತು. ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ತನಗೆ ಬಂದ ಸರ್ವೆ ನಂಬರ್ 121/1 ದುರಸ್ತಿಯಾಗಿ ಸರ್ವೆ ನಂಬರ್ 121/2 ಆಗಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಒಪ್ಪಿದ ಆರ್ ಟಿ ಸಿ ಯನ್ನು ನಿಡಿ-3 ಎಂದು ಗುರುತಿಸಲಾಯಿತು. ಸರ್ವೆ ನಂಬರ್ 121/1 ರ ಪೂರ್ವದ ಕಡೆ ಇರುವ ಬಂಡಿದಾರಿಯ ಕೆಳ ಭಾಗದಲ್ಲಿ ಸರ್ವೆ ನಂಬರ್ 119 ರ ನನ್ನ ಜಾಗದ ಕಡೆಯಿಂದ ಸರ್ವೆ ನಂಬರ್ 120/2 ರ ಬದಿಯಲ್ಲಿ ಒಂದು ಕಾಲುದಾರಿ ಹೋಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಮತ್ತು ನನ್ನ ತಮ್ಮ ಸರ್ವೆ ನಂಬರ್ 120/2 ರಲ್ಲಿ ಒಂದು ಬಂಡಿದಾರಿ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ . ನಾನು, ನನ್ನ ತಮ್ಮ ಮಾಡಿಕೊಂಡ ರಸ್ತೆಯು ಸುಮಾರು 10

ರಿಂದ 12 ಅಡಿ ಅಗಲದ ರಸ್ತೆಯಾಗಿದೆ. ಸದರಿ ಕಾಲುದಾರಿಯ ಮೂಲಕ ನನ್ನ ಪಾಲಿಗೆ ಬಂದ ಸರ್ವೆ ನಂಬರ್ 120/2 ಕ್ಕೆ 4 ಚಕ್ರದ ವಾಹನಗಳದಲ್ಲಿ ಬರಬಹುದು ಎಂದರೆ ಸರಿ.

41. ಉಡೋತುಮೊಟ್ಟೆಯಿಂದ ಬರುವ ಬಂಡಿದಾರಿಯ ಮೂಲಕ ನನ್ನ ಭಾಗಕ್ಕೆ ಬಂದ ಜಾಗಕ್ಕೆ 4 ಚಕ್ರದ ವಾಹನದಲ್ಲಿ ಬರಬಹುದು ಎಂದರೆ ಸರಿ. ನಿಪಿ-21 ರಲ್ಲಿ ನನ್ನ ಭಾಗಕ್ಕೆ ಬಂದ ಸರ್ವೆ ನಂಬರ್ 121/2 ರಲ್ಲಿ 70 ಸೆಂಟ್ ಜಾಗ ಪೂವಯ್ಯ ಅವರ ಕಾಫಿ ಕೃಷಿ ಜಾಗ ಎಂದು ನಮೂದಿಸಲಾಗಿದೆ ಎಂದರೆ ಸರಿ. ಅದೇ ಜಾಗದಲ್ಲಿ ನಾನು ರಸ್ತೆ ಮಾಡಿಕೊಂಡಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಿಡಿ-3 ರಲ್ಲಿ ಸರ್ವೆನಂಬರ್ 121/2 ರಲ್ಲಿ ನನ್ನ ಭಾಗಕ್ಕೆ 70 ಸೆಂಟ್ ಜಾಗ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸರ್ವೆ ನಂಬರ್ 120/2 ರಲ್ಲಿ 70 ಸೆಂಟು ಇದೆ, ಆದರೆ ಅದನ್ನು 121/2 ಕ್ಕೆ 70 ಸೆಂಟ್ ಎಂದು ತೋರಿಸಲಾಗಿದೆ ಹಾಗೂ ಅದನ್ನು ಬದಲಾಯಿಸಲು ಕಂದಾಯ ಇಲಾಖೆಗೆ ಅರ್ಜಿ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

42. ಮಡಿಕೇರಿಯಿಂದ ತಾಳತ್ಮನೆ, ಭಾಗಮಂಡಲಕ್ಕೆ ಹೋಗುವ ರಸ್ತೆಯ ಮೂಲಕ ನನ್ನ ಜಾಗಗಳಿಗೆ ಹೋಗಿ ಬರುವ ರಸ್ತೆ ಇರುವ ಕಾರಣ ನಾನು ಕಾಟಕೇರಿ ಭಾಗಮಂಡಲಕ್ಕೆ ಹೋಗುವ ರಸ್ತೆಯಿಂದ ಕವಲು ಒಡೆದು ಹೋಗುವ ರಸ್ತೆಯ ಮೂಲಕ ನನ್ನ ಜಮೀನಿಗೆ ಹೋಗುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಿಂದಿನಿಂದಲೂ ಸಹ ಸದರಿ ಉಡೋತುಮೊಟ್ಟೆಯಿಂದ ಕವಲು ಒಡೆದ ರಸ್ತೆಯ ಮೂಲಕ ನನ್ನ ಜಮೀನುಗಳಿಗೆ ಹೋಗುತ್ತಿಲ್ಲ ಎಂದರೆ ಸರಿಯಲ್ಲ.

43. ನಿಪಿ-3 ಭಾವಚಿತ್ರದಲ್ಲಿ ಕಾಣುವ ಕವಲು ಒಡೆದ ರಸ್ತೆಯು ಕಾಟಕೇರಿಯಿಂದ ಭಾಗಮಂಡಲಕ್ಕೆ ರಸ್ತೆಯ ಮಧ್ಯದಲ್ಲಿ ಕವಲು ಒಡೆಯುತ್ತದೆ. ನಿಪಿ-4, 5, 6, 7,8, 9,10,11,12 ರವರೆಗೆ ಕಾಣುವ ರಸ್ತೆಯು ನಿಪಿ-2 ರಲ್ಲಿ ಉತ್ತರದ ತುದಿಯಿಂದ ಸರ್ವೆ ನಂಬರ್ 118 ರ ಪೂರ್ವ ದಿಕ್ಕಿಗೆ ಇರುವ ಬಂಡಿದಾರಿಯಾಗಿದೆ. ಸದರಿ ಭಾವಚಿತ್ರಗಳಲ್ಲಿ ಕಾಣುವ ರಸ್ತೆಯನ್ನು

ಪ್ರತಿವಾದಿಯು ಅವರ ಜಮೀನುಗಳಿಗೆ ಹೋಗಲು ಬಳಸುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಎಲ್ಲಾ ಸಾರ್ವಜನಿಕರು ಅದೇ ರಸ್ತೆಯನ್ನು ಬಳಸುತ್ತಾರೆ ಎಂದು ನಡಿಯುತ್ತಾರೆ.

44. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಕಂಡಿಕೆ 7 ರಲ್ಲಿ ಬಂಡಿ ದಾರಿ ನಕಾಶೆಯಲ್ಲಿ ತೋರಿಸಿದ ರೀತಿ ಇಲ್ಲ ಅದು ಪೂರ್ವದ ಕಡೆಗೆ ಜರುಗಿ ಹೋಗಿದೆ ಎಂದು ಬರೆಸಿದ್ದೇನೆ ಎಂದರೆ ಸರಿ. ಬಂಡಿ ದಾರಿ ಎಲ್ಲಿ ಇರಬೇಕಿತ್ತೋ ಅಲ್ಲಿ ಇಲ್ಲ ಅದನ್ನು ತೆರವು ಮಾಡಿಸಿಕೊಡಿ ಎಂದು ನಾನು ಅರ್ಜಿ ಕೊಟ್ಟಿದೀರಾ ಎಂದರೆ ನಾನು ಕಾಲುದಾರಿಯನ್ನು ತೆರವು ಮಾಡಿಸಿ ಕೊಡಿ ಎಂದು ಅರ್ಜಿಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಾನು ಬಂಡಿ ದಾರಿಯನ್ನು ತೆರವು ಮಾಡಿಸಿ ಕೊಡಿ ಎಂದು ಯಾವ ಕಾರಣಕ್ಕೆ ಅರ್ಜಿ ಕೊಟ್ಟಿಲ್ಲ ಎಂದರೆ ಸಾಕ್ಷಿ ನಾವು ಬಂಡಿದಾರಿಯನ್ನೇ ನಾವು ಬಹಳ ವರ್ಷಗಳಿಂದ ಬಳಸುತ್ತಿದ್ದು, ಅಲ್ಲಿ ನಮಗೆ ಯಾವುದೇ ತೊಂದರೆ ಇಲ್ಲದ ಕಾರಣ ಬಂಡಿದಾರಿ ತೆರವು ಮಾಡಿಕೊಡಿ ಎಂದು ಅರ್ಜಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

45. ನಿಪಿ-2 ನಕಾಶೆಯ ಪ್ರಕಾರ ಬಂಡಿದಾರಿ ಇರಬೇಕಾದ ಜಾಗ ನನ್ನ ಸ್ವಾಧೀನದಲ್ಲೇ ಇದೆ. ಅದರಲ್ಲಿ ನಾನು ಕಾಫಿ ತೋಟ ಮಾಡುತ್ತಿದ್ದೇನೆ. ಸಾಕ್ಷಿ ಮುಂದುವರೆದು ನಾವು ಉಪಯೋಗಿಸುತ್ತಿದ್ದ ಬಂಡಿ ದಾರಿಯನ್ನೇ ಮೂಲವಾಗಿಟ್ಟುಕೊಂಡು ನಮ್ಮ ಆಸ್ತಿಗಳನ್ನು ಸರ್ವೆ ಮಾಡಿಸಿ ವಿಭಾಗನ್ನಾಗಿ ಮಾಡಿಕೊಂಡಿದ್ದೇವೆ. ಸದರಿ ಸರ್ವೆಯಲ್ಲಿ ಬಂಡಿದಾರಿ ನನ್ನ ಭಾಗದ ಪೂರ್ವಕ್ಕೆ ಬಂದಿರುತ್ತದೆ. ಬಂಡಿದಾರಿಯನ್ನು ಮೂಲವಾಗಿ ಇಟ್ಟುಕೊಂಡು ಸರ್ವೆ ಮಾಡಿಸಿದ ಬಗ್ಗೆ ನಿಪಿ-1 ವಿಭಾಗ ಪತ್ರದಲ್ಲಿ ಯಾವುದೇ ಬರವಣಿಗೆ ಇಲ್ಲ ಎಂದರೆ ಸರಿ. ಆದರೆ ನಕಾಶೆಯಲ್ಲಿ ತೋರಿಸಲಾಗಿದೆ. ವಿಭಾಗ ಪತ್ರದಲ್ಲಿ ಬಂಡಿದಾರಿಯು ನನ್ನ ಆಸ್ತಿಯ ಪೂರ್ವಕ್ಕೆ ಮತ್ತು ಪ್ರತಿವಾದಿಯ ಆಸ್ತಿಯ ಪಶ್ಚಿಮಕ್ಕೆ ಇದೆ ಎಂದು ತೋರಿಸಲಾಗಿದೆ ಎಂದರೆ ಸರಿ. ನಾನು ಬಂಡಿದಾರಿಯನ್ನು ಅತಿಕ್ರಮಣ ಮಾಡಿ ಕೃಷಿ ಮಾಡಿದ ಕಾರಣ ನಾನು ಬಂಡಿದಾರಿಯನ್ನು ತೆರವುಗೊಳಿಸಿ ಎಂದು ಅರ್ಜಿ ಕೊಟ್ಟಿಲ್ಲ ಎಂದರೆ ಹಲವಾರು ವರ್ಷಗಳಿಂದ ಬಂಡಿ ದಾರಿ ಇದ್ದು, ಆ ರೀತಿ ಅರ್ಜಿ ಕೊಡುವ ಅವಶ್ಯಕತೆ ಬಂದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು

ಪ್ರತಿವಾದಿಗಳು ಅವರ ಆಸ್ತಿಯ ಒಳಗೆ ಅವರ ಅನುಕೂಲಕ್ಕಾಗಿ ಮಾಡಿಕೊಂಡ ರಸ್ತೆಯಲ್ಲಿ ಹಕ್ಕನ್ನು ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.)

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ. ಎಫ್. ಸಿ., ಮಡಿಕೇರಿ.**